**ದಿನಾಂಕ: 04–12–2021ರಂದು ಶನಿವಾರ ಬೆಳಗ್ಗೆ 10:30 ಘಂಟೆಗೆ ವಾರ್ಡ್ ಸಂಖ್ಯೆ:81 ವಿಜ್ಞಾನನಗರ ವಾರ್ಡಿನ M.E.G ಬಡವಣೆಯಲ್ಲಿರುವ ವಿವಿದೊದ್ದೇಶ ಕಟ್ಟಡದ ಸಭಾಂಗಣದಲ್ಲಿ ಶ್ರೀ.ಕೇಶವ್,ತೋಟಗಾರಿಕೆ ಅಧೀಕ್ಷಕರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿ |
| 2. | ಶ್ರೀ. ಅಮೃತಾ ನಾಯ್ಕ್ , ಕಂದಾಯ ನಿರೀಕ್ಷಕರು |
| 3. | ಶ್ರೀ. ರಾಘವೇಂದ್ರ . ಕೆ , ಹಿರಿಯ ಆರೋಗ್ಯ ಪರಿವೀಕ್ಷಕರು |
| 4. | ಶ್ರೀ. ಅಮಿತ್. ಬಿ.ಸಿ ,ಕಿರಿಯ ಆರೋಗ್ಯ ಪರಿವೀಕ್ಷಕರು |
| 5. | ಶ್ರೀ. ಎಸ್.ಜಿ. ನಾಗರಾಜ್ ಮಾಜಿ ಪಾಲಿಕೆ ಸದಸ್ಯರು |
| 6. | ಶ್ರೀ. ರಮಣ ಮೂರ್ತಿ, ಎಸ್.ಆರ್.ಆರ್. ಬಡಾವಣೆ |
| 7. | ಶ್ರೀ. ವೆಂಕಟೇಶ್ವ ರಾವ್, ಶ್ರಾಜಿಶಾ ಮತ್ತು ಶಂಕರ್ , ಎಲ್.ಬಿ.ಎಸ್ ನಗರ |
| 9. | ಶ್ರೀ.ಪ್ರಕಾಶ್, ಶಿವಗಂಗ ಬಡಾವಣೆ |
| 9. | ಶ್ರೀ, ಸುರೇಶ್ ದೇಸಾಯಿ , ಜಗದೀಶ್ ನಗರ |
| 10. | ಶ್ರೀ. ಜೆ.ಗಣೇಶ್, ಎನ್. ಮಹೇಶ್. ಅಬ್ಬಯ್ಯ ರೆಡ್ಡಿ ಬಡಾವಣೆ |
| 11. | ಶ್ರೀ. ಮನೋಜ್ ಕುಮಾರ್ , ಬೃಂದಾವನ್ ಬಡಾವಣೆ |
| 12 | ಶ್ರೀ. ಶ್ರೀಧರ್ , ತಲಕಾವೇರಿ ಬಡಾವಣೆ |
| 13. | ನಿವಾಸಿ ಕ್ಷೇಮಾಭಿವೃದ್ದಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರು |

ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿಗಳು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಗೂಗಲ್ ಮೀಟ್ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಶ್ರೀ.ರಮಣ ಮೂರ್ತಿ ಮೊ: 7892976933 ರವರು ಹಿಂದಿನ ಸಭೆಯಲ್ಲಿ ಕಸ ಸಂಗ್ರಹಣೆಯ ಬಗ್ಗೆ ಇದ್ದ ಸಮಸ್ಯೆಯನ್ನು ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು, ಶ್ರೀ. ರಾಘವೇಂದ್ರ . ಕೆ ರವರು ಸಭೆಯಲ್ಲಿ ಚರ್ಚಿಸಿ ಮುಂದಿನ ದಿನಗಳಲ್ಲಿ ಘನತ್ಯಾಜ್ಯ ವಿಲೇವಾರಿಯಲ್ಲಿ ವ್ಯತ್ಯಯ ಉಂಟಾಗುವಂತೆ ನೋಡಿ ಕೊಳ್ಳುವುದಾಗಿ ತಿಳಿಸಿದರು.

ಜಲಮಂಡಳಿ ವತಿಯಿಂದ ಕೈಗೊಳ್ಳಬೇಕಾಗಿದ್ದ ನೀರು ಸರಬರಾಜು ಕಾಮಗಾರಿಯು ಇನ್ನು ಕಾರ್ಯಗತವಾಗದಿರುವುದಕ್ಕೆ ಮಂಡಳಿ ಅಧಿಕಾರಿಗಳಿಂದ ಸ್ಪಷ್ಟನೆ ಕೋರಿದ್ದು ಮುಂದಿನ ಸಭೆಯಲ್ಲಿ ಬಿ.ಡ್ಬ್ಲೂ.ಎಸ್.ಎಸ್.ಬಿ ಅಧಿಕಾರಿಗಳಿಂದ ಮಾಹಿತಿಯನ್ನು ಕೊಡಿಸುವುದಾಗಿ ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು ( ಬಿ.ಡ್ಬ್ಲೂ.ಎಸ್.ಎಸ್.ಬಿ)

ಶ್ರೀ. ಅಮಿತ್. ಬಿ.ಸಿ ,ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯಾ ವಿಲೇವಾರಿ ವಾಹನಗಳು ಕಾರ್ಯ ನಿರ್ವಹಿಸುವ ಬಗ್ಗೆ ಸವಿವರವಾಗಿ ಸಭೆಗೆ ಮಾಹಿತಿನ್ನು ನೀಡಿ ಮಹದೇವಪುರ ಕಡೆಗೆ 12 ಬ್ಲಾಕ್‌ಗಳು ಮತ್ತು ವಿಭೂತಿಪುರ ಕಡೆಗೆ 23 ಬ್ಲಾಕ್‌ಗಳು ಒಟ್ಟು 35 ಬ್ಲಾಕ್‌ಗಳಿದ್ದು ಈ ಬ್ಲಾಕ್‌ಗಳ ನಿರ್ವಹಣೆ/ ಮೇಲುಸ್ತುವಾರಿಯನ್ನು ಪಿಪಿಪಿ ಅಡಿಯಲ್ಲಿ ಇನ್ನು ಹಲವು ಸಂಘಸಂಸ್ಥೆಗಳ ಪಧಾದಿಕಾರಿಗಳು ಅವಶ್ಯವಿರುವುದಾಗಿ ಇದರಲ್ಲಿ ಅಸಕ್ತಿ ಉಳ್ಳವರು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

ಜಗದೀಶ್ ನಗರದ ಶ್ರೀ. ಸುರೇಶ್ ದೇಸಾಯಿ ಮೊ:9448387562 ರವರು ಮಾತನಾಡಿ ರಸ್ತೆ ಅಭಿವೃದ್ಧಿಗಾಗಿ 9ನೇ ಅಡ್ಡರಸ್ತೆಯಲ್ಲಿ ವೆಟ್ ಮಿಕ್ಸ್ ಮೆಕಡಮ್ ( w.m.m ) ಗಾಗಿ ಜಲ್ಲಿ ಹಾಕಿದ್ದು ಸುಮಾರು 45 ದಿನ ಕಳೆದರೂ ಇನ್ನು ಡಾಂಬರೀಕರಣ ಮಾಡಿಲ್ಲವೆಂದು ಸಭೆಯ ಗಮನಕ್ಕೆ ತಂದರು ಹಾಗೂ ರಸ್ತೆಗಳಲ್ಲಿ ಕಾಲಕಾಲಕ್ಕೆ ಸ್ವಚ್ಚತೆಯನ್ನು ಕಾಪಾಡಲು ಪೌರಕಾರ್ಮಿಕರನ್ನು ಹೆಚ್ಚಾಗಿ ನಿಯೋಜಿಸುವಂತೆ ಕೋರಿದರು.

ಕಿರಿಯ ಅಭಿಯಂತರರು 2 ವಾರಗಳಲ್ಲಿ ಜಗದೀಶ್ ನಗರದ ಎಲ್ಲಾ ರಸ್ತೆಗಳನ್ನು ಡಾಂಬರೀಕರಣ ಮಾಡುವುದಾಗಿ ತಿಳಿಸಿದರು.

ಕ್ರಮ: ಕಿರಿಯ ಅಭಿಯಂತರರು ಮತ್ತು ಆರೋಗ್ಯ ಪರಿವೀಕ್ಷಕರು

ಶ್ರೀ.ಪ್ರಕಾಶ್, ಶಿವಗಂಗ ಬಡಾವಣೆ ರವರು ಮಾತನಾಡಿ ಚರಂಡಿಗಳಲ್ಲಿ ಕಾಲಕಾಲಕ್ಕೆ ಹೂಳು ತೆಗೆಯುವಂತೆ ಕೋರಿದರು.

ಶ್ರೀ. ಶ್ರೀಧರ್ , ತಲಕಾವೇರಿ ಬಡಾವಣೆ ರವರು ಮಾತನಾಡಿ ಮುಖ್ಯರಸ್ತೆಗಳಲ್ಲಿ ಅನಧಿಕೃತವಾಗಿ ಅಳವಡಿಸಿರುವ ಫ್ಲೆಕ್ಸ್ ಮತ್ತು ಬಾನರ್‌ಗಳನ್ನು ತೆರವುಗೊಳಿಸುವಂತೆ ಕೋರಿದರು.

ಕ್ರಮ: ಕಿರಿಯ ಅಭಿಯಂತರರು ಮತ್ತು ಆರೋಗ್ಯ ಪರಿವೀಕ್ಷಕರು

ಎಲ್.ಬಿ.ಶಾಸ್ತ್ರಿನಗರದ ಶ್ರೀ. ವೆಂಕಟೇಶ್ವ ರಾವ್, ಶಾಜಿಶಾ ಮತ್ತು ಶಂಕರ್ ರವರು( ಆರ್.ಜಿ ಹೋಮ್ಸ್) 3ನೇ ಮುಖ್ಯರಸ್ತೆ ಮತ್ತು 5ನೇ ಎ ಅಡ್ಡರಸ್ತೆಗಳಲ್ಲಿ ಕಾವೇರಿ ನೀರು ಇಲ್ಲದೆ ತುಂಬಾ ತೊಂದರೆಯಾಗಿದ್ದು ಕೊಡಲೇ ಹೊಸದಾಗಿ ನಿರ್ಮಿಸಿರುವ ಜಲಾಗಾರದಿಂದ ಸಂಪರ್ಕ ಕಲ್ಪಿಸಿ ಕೊಡುವಂತೆ ಕೋರಿದರು.

ಕ್ರಮ: ಸಹಾಯಕ ಅಭಿಯಂತರರು ( ಬಿ.ಡ್ಲ್ಯೂ.ಎಸ್.ಎಸ್.ಬಿ)

ಶ್ರೀ. ಮನೋಜ್ ಕುಮಾರ್ , ಬೃಂದಾವನ್ ಬಡಾವಣೆ ರವರು ಮಾತನಾಡಿ ರಸ್ತೆಗಳಲ್ಲಿ ಗುಂಡಿಮುಚ್ಚುವ ಕಾರ್ಯ ಪ್ರಗತಿಯಲ್ಲಿದ್ದು ಪೂರ್ಣವಾಗಿ ಮುಗಿಸಿ ಕೊಡುವಂತೆ ಹಾಗೂ ಐಶ್ವರ್ಯ ಅಪಾರ್ಟ್‌ಮೆಂಟ್ ರಸ್ತೆಯನ್ನು ತುರ್ತಾಗಿ ಡಾಂಬರೀಕರಣ ಮಾಡುವಂತೆ ಕೋರಿದರು.

ಕ್ರಮ : ವಾರ್ಡ್ ಅಭಿಯಂತರರು

ಅಬ್ಬಯ್ಯ ರೆಡ್ಡಿ ಬಡಾವಣೆಯ ಶ್ರೀ. ಜೆ.ಗಣೇಶ್, ಎನ್. ಮಹೇಶ್ 5ನೇ ಅಡ್ಡರಸ್ತೆಯಲ್ಲಿ ಕಸ ತೆಗೆದು ಸ್ವಚ್ಚಗೊಳಿಸಿಕೊಡುವಂತೆ ಕೋರಿದರು.

ಕ್ರಮ : ಆರೋಗ್ಯ ಪರಿವೀಕ್ಷಕರು

ಮಾಜಿ ಪಾಲಿಕೆ ಸದಸ್ಯರು ಶ್ರೀ.ಎಸ್.ಜಿ ನಾಗರಾಜ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಅವಶ್ಯವಿರುವ ಕಡೆ ಚರಂಡಿಗಳಲ್ಲಿ ಹೂಳು ತೆಗೆಯುವುದು, ಮ್ಯಾನ್ ಹೋಲ್‌ಗಳನ್ನು ಸ್ವಚ್ಚಗೊಳಿಸುವುದು ಮತ್ತು ವಿವಿಧ ರಸ್ತೆಗಳ ಅಭಿವೃಧಿ ಕಾರ್ಯಗಳನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಕೋರಿದರು.

ಮಾನ್ಯ ಅಧ್ಯಕ್ಷರು ಈ ಬಗ್ಗೆ ಕ್ರಮ ವಹಿಸುವುದಾಗಿ ತಿಳಿಸುತ್ತಾ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಿರಿಯ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.81,ವಿಜ್ಞಾನ ನಗರ

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ತೋಟಗಾರಿಕೆ ಅಧೀಕ್ಷಕರು, ಬಿ.ಬಿ.ಎಂ.ಪಿ ಮಹದೇವಪುರ ವಲಯ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ವಿಜ್ಞಾನ ನಗರ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಬಿ.ಬಿ.ಎಂ.ಪಿ ಮಹದೇವಪುರ ವಲಯ

6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ, ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು-11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
8. ಆರೋಗ್ಯ ಅಧಿಕಾರಿಗಳು ವಿಜ್ಞಾನ ನಗರ ವಾರ್ಡ್.
9. ಸಹಾಯಕ ನಿದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ವಿಜ್ಞಾನ ನಗರ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ವಿಜ್ಞಾನ ನಗರ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೆರ್ ಆಸೋಸಿಯೇಷನ್ಸ, ವಿಜ್ಞಾನ ನಗರ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ,ಆರ್.ಡಬ್ಲ್ಯೂ.ಎ ಗಳು ವಿಜ್ಞಾನ ನಗರ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.